

ನಾರದರು, "ಶಕ್ತಿಯಿಂದಲ್ಲ, ಅದನ್ನು ಯುಕ್ತಿಯಿಂದ ಸಾಧಿಸು" ಎಂದು ಹೇಳಿ ಹೊರಟುಹೋದರು.

ಕಂಸನು ತನ್ನ ಆಸ್ಥಾನದಲ್ಲಿದ್ದ ಚಾಣೂರ ಮತ್ತು ಮುಷ್ಟಿಕರೆಂಬ ದೈತ್ಯ ಮಲ್ಲರನ್ನು ಕರೆಸಿದನು. ಅವರಿಗೆ, "ಬಲರಾಮ ಕೃಷ್ಣರನ್ನು ಇಲ್ಲಿಗೆ ಕರೆಸುತ್ತೇನೆ. ನೀವು ಅವರಿಬ್ಬರನ್ನೂ ಮಲ್ಲಯುದ್ಧದಲ್ಲಿ ಸೋಲಿಸಿ ಕೊಲ್ಲಬೇಕು" ಎಂದನು. ವಸುದೇವ, ದೇವಕಿಯರನ್ನು ಪುನಃ ಸೆರೆಯಲ್ಲಿಟ್ಟನು. ಇದಕ್ಕೂ ಮೊದಲೇ ಮದೋನ್ಮತ್ತ ಆನೆಯನ್ನು ಕೃಷ್ಣಬಲರಾಮರ ಮೇಲೆ ಹಾಯಿಸಿ ಕೊಲ್ಲಬಹುದೆಂದೂ ಕಂಸನು ಯೋಚಿಸಿದನು. ಯಾದವರಿಗೆ ಪ್ರಿಯನಾದ ಅಕ್ರೂರನನ್ನು ಅರಮನೆಗೆ ಕರೆಸಿ, "ನಾನು ಧನುರ್ಯಾಗ ಎಂಬ ಯಜ್ಞವನ್ನು ಮಾಡುತ್ತಿದ್ದೇನೆ. ಆದ್ದರಿಂದ ಯಾದವರನ್ನು ಕೃಷ್ಣ, ಬಲರಾಮರ ಸಮೇತ ಕರೆದುಕೊಂಡು ಬಾ" ಎಂದು ರಮಿಸಿ ಕಳುಹಿಸಿದನು.

ಅಕ್ರೂರನಿಗೆ ಶ್ರೀಕೃಷ್ಣನು ಸಾಕ್ಷಾತ್ ಭಗವಂತನ ಅವತಾರ ಎಂದೂ, ಬಲರಾಮನು ಆದಿಶೇಷನ ಅವತಾರ ಎಂದೂ ತಿಳಿದಿತ್ತು. ಅವರ ಮಹಿಮೆ ಹಿರಿಮೆಯನ್ನು ನೆನೆಸುತ್ತಾ ವೃಂದಾವನ ಪ್ರವೇಶ ಮಾಡಿದನು. ದನಗಳ ಗುಂಪಿನಲ್ಲಿದ್ದ ಕೃಷ್ಣ, ಬಲರಾಮರನ್ನು ಕಂಡು ಅವನು ಸಂತೋಷಗೊಂಡನು. ಅವನು ಅವರ ಹತ್ತಿರ ಬಂದನು. ಆನಂದದಿಂದ ಅವನ ಗಂಟಲಲ್ಲಿ ಮಾತೇ ಹೊರಡಲಿಲ್ಲ. ಕೃಷ್ಣ ಬಲರಾಮರಿಗೆ ಅಕ್ರೂರನು ವಂದಿಸಿದನು. ಅವರು ಅವನನ್ನು ಪ್ರೀತಿಯಿಂದ ಅಲಂಗಿಸಿದನು. ಆದರಪೂರ್ವಕವಾಗಿ ಮನೆಗೆ ಕರೆತಂದು, ಅವನನ್ನು ಸತ್ಕರಿಸಿ ಉಪಚರಿಸಿದರು.

ಕಂಸನು ನಡೆಸುತ್ತಿರುವ ಯಜ್ಞ ಮತ್ತು ಅವರನ್ನು ಕರೆದುಕೊಂಡು ಬರಲು ಹೇಳಿರುವ ವಿಷಯವನ್ನು ತಿಳಿದ ಕೃಷ್ಣಬಲರಾಮರು, "ನಾವು ಕೂಡ ಕಂಸನನ್ನು ನೋಡಬೇಕಿದೆ; ಕೂಡಲೇ ಅಲ್ಲಿಗೆ ಹೊರಡೋಣ" ಎಂದು ನಿರ್ಧರಿಸಿದರು. ಆತನೊಂದಿಗೆ ಗೋಪಾಲಕರು ಮತ್ತು ಇತರರು ಮಥುರಾ ಪಟ್ಟಣಕ್ಕೆ ಬಂದು, ಅಲ್ಲಿನ ಉದ್ಯಾನವನವೊಂದರಲ್ಲಿ ತಂಗಿದರು.

ಮರುದಿನ ಪುರಪ್ರವೇಶ ಮಾಡಿದ ಬಲರಾಮಕೃಷ್ಣರು ದಾರಿಯಲ್ಲಿ ನಡೆದುಬರುತ್ತಿದ್ದಾಗ ಉಪ್ಪರಿಗೆಯಲ್ಲಿದ್ದ ಸ್ತ್ರೀಯರು, ವೃದ್ಧರು, ಮತ್ತಿತರರು ಅವರನ್ನು ನೋಡಿ ಆನಂದಿಸುತ್ತಿದ್ದರು. ಅರಮನೆಯ ಪೋಷಾಕನ್ನು ಧರಿಸಲು ಕೊಡಲು ಒಪ್ಪದ ಅಗಸನನ್ನು ಕೊಂದು, ರಾಜಪೋಷಾಕನ್ನು ಧರಿಸಿದರು. ಇವರಿಬ್ಬರಿಗಾಗಿ ಹೂಮಾಲೆಯನ್ನು ಸಿದ್ಧಪಡಿಸಿಕೊಂಡಿದ್ದ ಸುಧಾಮನೆಂಬ ಹೂಗಾರನಿಂದ ಹೂಮಾಲೆಯನ್ನು ಸ್ವೀಕರಿಸಿದರು. ಕುರೂಪಿಯಾದ ತ್ರಿವಕ್ರೆಯು ಕಂಸನಿಗಾಗಿ ಗಂಧವನ್ನು ತೆಗೆದುಕೊಂಡು ಹೋಗುತ್ತಿದ್ದಳು. ಅವಳು ಕೃಷ್ಣ–ಬಲರಾಮರಿಬ್ಬರನ್ನು ಕಂಡು ಅವರ ಅಂದ ಮತ್ತು ಗಾಂಭೀರ್ಯಕ್ಕೆ ಮರುಳಾಗಿ, ಗಂಧವನ್ನು ಅವರಿಗೆ ಅರ್ಪಿಸಿದಳು. ತ್ರಿವಕ್ರೆಯು ಕೂರೂಪಿಯಾಗಿದ್ದು, ಗೂನು ಬೆನ್ನಿನವಳಾಗಿ ಬಗ್ಗಿ ನಡೆಯುತ್ತಿದ್ದಳು. ಈಕೆಯನ್ನು ಉದ್ಧರಿಸಬೇಕೆಂದು ಶ್ರೀಕೃಷ್ಣನು ತೀರ್ಮಾನಿಸಿದನು. ಆಕೆಯ ಮುಖವನ್ನು ಹಿಡಿದು ಮೇಲೆತ್ತಿದನು. ಬಾಗಿದ್ದ ಆಕೆಯ ಶರೀರ ನೆಟ್ಟಗಾಯಿತು. ಕುರೂಪಿಯಾಗಿದ್ದವಳು ಸುಂದರಿಯಾಗಿ ಬದಲಾದಳು. ಆಕೆಯು ಸಂತಸಗೊಂಡು ತನ್ನ ಬದುಕನ್ನು ಕೃಷ್ಣನ ಸೇವೆಗಾಗಿ ಮೀಸಲಿಟ್ಟಳು.

ನಂತರ ಇಬ್ಬರೂ ಯಾಗ ಮಂಟಪಕ್ಕೆ ಬಂದರು. ಬಲರಾಮ, ಕೃಷ್ಣರು ಅಲ್ಲಿ ಪೂಜಿಸಿ ಇಟ್ಟಿದ್ದ ಶಿವಧನುಸ್ಸನ್ನು ಮುರಿದು ಹಾಕಿದರು. ಆ ಮುರಿದು ಬಿದ್ದ ಧನುಸ್ಸಿನ ಶಬ್ದವು ಸಿಡಿಲಿನಂತೆ ನಗರಕ್ಕೆಲ್ಲಾ ಕೇಳಿಸಿತು. ಅಲ್ಲಿದ್ದ ರಾಜಭಟರು, ಸೈನಿಕರು ಅವರಿಬ್ಬರ ಮೇಲೆ ಯುದ್ಧಕ್ಕೆ ಬಂದರು. ಕೃಷ್ಣ, ಬಲರಾಮರು ತಾವು ಮುರಿದ ಬಿಲ್ಲಿನಿಂದಲೇ ಅವರೆಲ್ಲರನ್ನೂ ಕೊಂದರು.

ಪುರಪ್ರವೇಶ ಮಾಡಿದ ಕ್ಷಣದಿಂದ ಬಲರಾಮ, ಕೃಷ್ಣರಿಂದ ನಡೆಯುತ್ತಿದ್ದ ಘಟನೆಗಳನ್ನು ನೋಡಿದ ಕಂಸನು, ಅದರಲ್ಲೂ ಮುರಿದ ಶಿವಧನುಸ್ಸಿನ ಶಬ್ದವನ್ನು ಕೇಳಿ ಮರಣಭಯದಿಂದ ತತ್ತರಿಸಿದನು. ಇದುವರೆಗೂ ಎಲ್ಲರ ಪಾಲಿಗೆ ಮರಣಭಯವನ್ನು ತಂದೊಡ್ಡುತ್ತಿದ್ದ ಕಂಸನಿಗೆ ಮರಣದ ಭಯದ ಅರಿವು ಉಂಟಾಗಿ, ಅದು ಅವನನ್ನು ಕಂಗೆಡಿಸಿತು. ಅವನು ಮದೋನ್ಮತ್ತ ಆನೆಯನ್ನು ಬಲರಾಮಕೃಷ್ಣರಿಬ್ಬರ ಮೇಲೆ ಹಾಯಿಸುವಂತೆ ಹೇಳಿದನು. ಬಲರಾಮ ಕೃಷ್ಣರು ಆನೆಯನ್ನು ಸಂಹರಿಸಿ, ಅರಮನೆಯಲ್ಲಿ ಮಲ್ಲಯುದ್ಧದ ಜಾಗಕ್ಕೆ ಬಂದರು. ಅಲ್ಲಿ ಕಂಸನು ಸಿಂಹಾಸನದ ಮೇಲೆ ಕುಳಿತಿದ್ದನು. ಅಷ್ಟರಲ್ಲಿ ಊರ ಜನರೆಲ್ಲರೂ ಅಲ್ಲಿ ಬಂದು ಸೇರಿದರು. ಬಲರಾಮ, ಕೃಷ್ಣರು ಮಲ್ಲಯುದ್ಧಕ್ಕಾಗಿ ಬಂದ ಚಾಣೂರ, ಮುಷ್ಟಿಕರಿಬ್ಬರನ್ನೂ ದರದರನೆ ಎಳೆದುತಂದು ನೆಲಕ್ಕೆ ಬೀಸಿ ಒಗೆದರು. ಕೃಷ್ಣನು ಕಂಸನತ್ತ ಓಡಿ ಆತನನ್ನು ಹಿಡಿದು ನೆಲಕ್ಕೆ ಒಗೆದನು. ಕಂಸನ ಪ್ರಾಣಪಕ್ಷಿಯು ಹಾರಿಹೋಯಿತು. *

### ಭಾಗವತವನ್ನು ಕುರಿತು ಶ್ರೀರಾಮಕೃಷ್ಣರು

**ಒಂದು ದಿನ ದಕ್ಷಿಣೇಶ್ವರದ ರಾಧಾಕಾಂತ ದೇವಾಲಯದಲ್ಲಿ ಭಾಗವತ ಪ್ರವಚನವನ್ನು ಕೇಳಿದ ಶ್ರೀರಾಮಕೃಷ್ಣರು ಭಾವಸಮಾಧಿ ಹೊಂದಿ, ಶ್ರೀಕೃಷ್ಣನ ಮನಮೋಹಕ ರೂಪದ ದರ್ಶನ ಅವರಿಗಾಯಿತು. ಕೃಷ್ಣನ ಪಾದಪದ್ಮಗಳಿಂದ ಹೊರಬಂದ ಬೆಳಕಿನ ಕಿರಣವೊಂದು ಮೊದಲು ಭಾಗವತ ಗ್ರಂಥವನ್ನು, ಬಳಿಕ ತಮ್ಮನ್ನು ಸ್ಪರ್ಶಿಸಿದ್ದನ್ನು ಅವರು ಕಂಡರು. ಈ ಮೂಲಕ ಆ ದಿವ್ಯ ಕಿರಣಗಳು ಭಗವಂತ, ಭಾಗವತ, ಭಕ್ತ – ಈ ಮೂರನ್ನೂ ಬೆಸೆದಿವೆ ಎಂದು ಅರಿತುಕೊಂಡ ಅವರು, ಈ ದರ್ಶನದ ನಂತರ ಹೇಳುತ್ತಿದ್ದರು: "ಭಗವಾನ್, ಭಕ್ತ, ಭಾಗವತ – ಈ ಮೂರೂ ನಿಜವಾಗಿಯೂ ಒಂದೇ ಎಂದು ನಾನು ಅರಿತುಕೊಂಡೆ."**